Reg.No. M. 1550.
KODAGU MERCARA, (Coorg).

-29-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಕು ೨೬—೧—೧೯೪೫ನೇ ಶುಕ್ರವಾರ. | ಸಂಚಿಕೆ ೩೪

ಕೊಡಗಿನಲ್ಲಿ ಜಾನುವಾರುಗಳ ರಕ್ಷಣೆ.

— ಸರಕಾರದ ದೃಷ್ಟಿಕೋನ ಬದಲಾಗಬೇಕು —

ಕೊಡಗಿನ ರೈತನಿಗೆ ಸಾಕಷ್ಟು ದನಕರುಗಳು ದೊರೆಯದೆ ಉಪಸ್ಥಿತವಾಗಿರುವ ತೊಂದರೆಯು ಅನರ್ಣನೀಯವಾದುದು. ದೊರೆತರೂ ಶಕ್ತಿಗೆ ಮೀರಿದ ಕ್ರಯ. ಇಂಥಾ ಕ್ರಯಕೊಟ್ಟು ತೆಗೆದರೂ ಖಾಯಿಲೆಯ ಹಾವಳಿ! ಹೀಗಾಗಿ ರೈತನು ಕಂಗಾಲಾಗಿದ್ದಾನೆ. ಈ ದುರ್ದೆಶೆಯು ಸರಕಾರಕ್ಕೂ ತಿಳಿಯದ್ದಲ್ಲ. ಇದನ್ನು ಅರಿತುಕೊಂಡೇ ಈ ದಾರುಣ ಪರಿಸ್ಥಿತಿಯನ್ನು ಸುಧಾರಿಸಿ ಬಡ ರೈತನಿಗೆ ಸಹಾಯಮೂಡಲಿಕ್ಕಾಗಿ ಸರಕಾರವು ಖಡ್ಡಾಯವಾದ ಅಪ್ಪಣೆಯನ್ನು ಹೊರಡಿಸಿ ಪ್ರತಿಯೊಬ್ಬನೂ ತನ್ನ ದನಕರುಗಳಿಗೆ ಇಂಜೆಕ್ಷನ್ ಮಾಡಿಸಿಕೊಳ್ಳಬೇಕೆಂದು ವಿಧಿಸಿದೆ. ಖಾಯಿದೆಯೇನೋ ನೋಡಲು ಯಾವ ನ್ಯೂನತೆಯಿಂದಿಲ್ಲ. ಆದರೆ ನಿಜವಾಗಿಯೂ ಇದರಿಂದ ಬಡ ರೈತನಿಗೆ ಹಿತವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು.

ಕೊಡಗಿನ ಉದ್ದಗಲಕ್ಕೂ ಇಂದು ಉಪಯೋಗಿಸುತ್ತಿರುವದು ಆಡಿನ 'ಟಿಶ್ಯೂ ವೇಕ್ಸಿನ್' (Goat Tissue Vaccine) ಆಗಿದೆ. ಇದನ್ನು ಉಪಯೋಗಿಸುವದರಿಂದ ನಿರೀಕ್ಷಿಸಿದಷ್ಟು ಪ್ರತಿಫಲದೊರೆಯುತ್ತಿರುವದಿಲ್ಲ ಇದಕ್ಕೆ ಹಲವು ಕಾರಣಗಳಿವೆ. ಇದರ ಬಗ್ಗೆ ಹಲವು ಮಹನೀಯರ ಅಭಿಪ್ರಾಯಗಳನ್ನು ಇದರಡಿ ಕೊಡಲಾಗಿದೆ.

(1) ಶೀತ ಕಾಲದಲ್ಲಿ ಸಾಧಾರಣ ವಾತಾವರಣದಲ್ಲಿ ಟಿಶ್ಯೂವೇಕ್ಸಿನು 15 ದಿನಗಳ ವರೆಗೆ ತನ್ನ ಗುಣಕಾರಕ ಶಕ್ತಿಯನ್ನು ಕಳಕೊಳ್ಳದೆ ಇರಬಹುದು. ಆದರೆ ಶೆಕೆ ಕಾಲದಲ್ಲಿ ಈ ಅವಧಿಯು ಬಹು ಮಟ್ಟಿಗೆ ಕಡಿಮೆಯಾಗುವದು. (ಮುಕ್ತೇಶ್ವರ ಸರ್ಕ್ಯೂಲರ್ 18-10-44.)

(2) 45 ಡಿಗ್ರಿ ಫೆರ್‌ನಹಿಟ್ ಶೆಕೆ ಇರುವ ಚಳಿ ಉಗ್ರಾಣಗಳಲ್ಲಿ ಈ ವೇಕ್ಸಿನು 30 ದಿನಗಳ ವರೆಗೆ ಇರುವದೆಂದೂ, ಚಳಿ ಉಗ್ರಾಣದಿಂದ ಹೊರತೆಗೆದ ಆರು ದಿನಗಳ ವರೆಗೆ ಮಾತ್ರ ಅದು ಶಕ್ತಿಯಿಂದ ಕೂಡಿರುವದೆಂದೂ 7ನೇ ದಿನದಿಂದ ಅದು ಉಪಯೋಗಿಸಲು ನಿಷ್ಪ್ರಯೋಜಕವಾಗುವದೆಂದೂ ಪರಿಶೋಧನೆಗಳಿಂದ ಕಂಡು ಬಂದಿದೆ. (ಬಂಗಾಳದ ವೆಟರ್‌ನರಿ ಇಲಾಖೆಯ ಡೈರೆಕ್ಟರು.)

(3) ಹೊರಗೆ ತೆಗೆದ ಆರು ದಿನಗಳ

ಲೇ:-'ವಸು'

ನಂತರ ಈ ಟಿಶ್ಯೂವೇಕ್ಸಿನನ್ನು ಉಪಯೋಗಿಸಲಿಕ್ಕೆ ಕೂಡದು (ಹೈದರಬಾದ್-ಡೆಕ್ಕನ್ ವೆಟರ್‌ನರಿ ಇಲಾಖೆಯ ಡೈರೆಕ್ಟರು.)

(4) 85 ಡಿಗ್ರಿ ಫೆರ್‌ನಹಿಟ್ ಶೆಕೆಯಿರುವ ಕೋಣೆಯಲ್ಲಿ 5 ದಿನಗಳ ವರೆಗೆ ಮಾತ್ರ ಈ ವೇಕ್ಸಿನು ಉಪಯೋಗಾರ್ಹವಾಗಿರುವದು. (ಬೊಂಬಾಯಿ ವೆಟರ್‌ನರಿ ಕಾಲೇಜಿನ ಪ್ರಿನ್ಸಿಪಾಲರು.)

ಮೇಲೆ ಕೊಟ್ಟ ಮಹನೀಯರ ಅಭಿಪ್ರಾಯದಂತೆ ಟಿಶ್ಯೂವೇಕ್ಸಿನನ್ನು ಹೊರಗೆ ತೆಗೆದ ಆರು ದಿನಗಳ ನಂತರ ಉಪಯೋಗಿಸಕೂಡದೆಂಬುವದು ಕಂಡುಬರುವದು. ಕೊಡಗಿನಲ್ಲಿ ಈ ಔಷಧಿಯನ್ನು ಶಕ್ತಿಕೆಡದಂತೆ ಇಟ್ಟುಕೊಳ್ಳಲು ಶೀತ ಉಗ್ರಾಣಗಳು ಇಲ್ಲ. ಈ ಔಷಧಿಯನ್ನು ಮುಕ್ತೇಶ್ವರದಿಂದ ತರಿಸುವದಾಗಿದೆ. ಮುಕ್ತೇಶ್ವರದಿಂದ ಕೊಡಗಿಗೆ ಔಷಧಿ ಬಂದು ತಲಪಬೇಕಾದರೆ ಕಡಿಮೆ ಎಂಟು ಹತ್ತು ದಿನಗಳು ಬೇಕೇಬೇಕು, ಔಷಧಿಯು ಕೊಡಗಿಗೆ ಬಂದು ತಲಪುವಾಗ ಅದನ್ನು ಎಷ್ಟೇ ಭದ್ರವಾಗಿ ರವಾನಿಸಿದ್ದರೂ ತನ್ನ ಚಿಕಿತ್ಸಕ ಶಕ್ತಿಯನ್ನು ಅದು ಕಳೆದುಕೊಂಡಿರುತ್ತದೆ. ಅದನ್ನು ಉಪಯೋಗಿಸುವದರಿಂದ ಕೊಡಗಿನಲ್ಲಿಯ ದನಗಳ ರೋಗ ಹೇಗೆ ನಿವಾರಣೆಯಾದೀತು?

ಇದೇ ಔಷಧಿಯನ್ನು ಉಪಯೋಗಿಸಬೇಕೆಂದು ಇಂಡಿಯಾ ಸರಕಾರವು ಸೂಚಿಸಿದೆಯೆಂದು ತಿಳಿಯಬಂದಿದೆ. ಹೀಗೆ ಹೇಗೆ ಸೂಚಿಸಿದೆಯೆಂದು ಕಣ್ಣುಮುಚ್ಚಿಕೊಂಡು ಅದನ್ನು ಅನುಸರಿಸುವದರಲ್ಲಿ ಅರ್ಥವಿಲ್ಲ. ಕೊಡಗಿಗೆ ಔಷಧಿಯು ಬಂದು ಮುಟ್ಟಬೇಕಾದ ಅವಧಿ, ಶೀತ ಉಗ್ರಾಣಗಳ ಅಭಾವ ಇವು ಕೇಂದ್ರ ಸರಕಾರಕ್ಕೆ ತಿಳಿದಿರಲಿಕ್ಕಿಲ್ಲ. ಮೇಲಾಗಿ ಮದ್ರಾಸ್ ಸರಕಾರವು ಈ ವೇಕ್ಸಿನನ್ನು ಉಪಯೋಗಿಸುತ್ತಿರುವದಿಲ್ಲ. ಮೈಸೂರಿನವರೂ ಇದನ್ನು ಉಪಯೋಗಿಸುತ್ತಿಲ್ಲ. ಕೇಂದ್ರ ಸರಕಾರದ ಆಜ್ಞೆಯೊಡರೆ ಮದ್ರಾಸಿನವರು ಇದನ್ನು ಉಪಯೋಗಿಸದೆ ಇರುವದು ಹೇಗೆ? ಹೇಗೂ ಇರಲಿ, ಔಷಧಿಯನ್ನು ಮಾಡುವದು ಗುಣವಾಗುವ ದೃಷ್ಟಿಯಿಂದಲ್ಲದೆ ಇಂಥಾವರ ಅಪ್ಪಣೆಯಾಗಿದೆಯೆಂದಲ್ಲ. ಆದ್ದರಿಂದ ಈಗ ಉಪಯೋಗಿಸುತ್ತಿರುವ ಟಿಶ್ಯೂವ್ಯಾಕ್ಸಿನು ಮುಕ್ತೇಶ್ವರದಿಂದ ಬಂದು ತಲಪುವಾಗಲೇ ನಿರ್ಜೀವವಾಗಿ ನಿರುಪಯೋಗಿಯಾಗಿರುವದರಿಂದ ಅದನ್ನು ತರಿಸುವದನ್ನು ನಿಲ್ಲಿಸಬೇಕು. ಕಮ್ಮಿ ಕ್ರಯದಲ್ಲಿ ಇದು ಸಿಕ್ಕುವದೇನೋ ಸಹಜ. ಆದರೆ ಯಾವ ಲಾಭಕ್ಕಾಗಿ ಇದರಿಂದ ರೈತರು ತಮ್ಮ ದನಗಳಿಗೆ ಇಂಜೆಕ್ಷನ್ ಮಾಡಿಸಿಕೊಳ್ಳುವದು?

ಬಂಗಾಳದಲ್ಲಿ ಇದೇ ವೇಕ್ಸಿನನ್ನು ಉಪಯೋಗಿಸುತ್ತಾರೆಂಬದಕ್ಕೆ ಸರಿಯಾದ ಪುರಾವೆ ಕಂಡುಬರದಿರುವದರಿಂದ ಅದು ಫಲಕಾರಿಯೂ ಆಗಿದೆ. ಈ ಔಷಧಿಗಳನ್ನು ಕಳುಹಿಸುವಾಗ 45 ಡಿಗ್ರಿ ಫೆರ್‌ನಹಿಟ್ ಶೆಕೆಯ 'ಥರ್ಮಸ್' ಪೀಪಾಯಿಗಳಲ್ಲಿ ಕಳುಹಿಸುತ್ತಾರೆ. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಇದನ್ನು ಶೀತ ಉಗ್ರಾಣದಲ್ಲಿ ಇಟ್ಟಿರುತ್ತಾರೆ. ಅವಶ್ಯಬಿದ್ದಾಗ ತೆಗೆದು ಉಪಯೋಗಿಸುವರು. ಅಂಥಾ ಅನುಕೂಲತೆಗಳು ಕೊಡಗಿನಲ್ಲಿಲ್ಲದಿರುವದರಿಂದ ಈ ವೇಕ್ಸಿನು ಇಲ್ಲಿ ನಿಷ್ಪ್ರಯೋಜಕವಾಗಿದೆ.

ಇದರ ಬದಲು ಬೆಂಗಳೂರಿನಲ್ಲಿ ತಯಾರಾಗುವ ಬ್ಲಡ್‌ವಿರಸ್ (Goat blood virus) ನ್ನು ಉಪಯೋಗಿಸಿದರೆ ಕೊಡಗಿಗೆ ಲಾಭವಾಗುವದು. ಈ ಬ್ಲಡ್‌ವಿರಸನ್ನು ತಯಾರಿಸುವದರ ಹೆಚ್ಚಿನ ಮಾಹಿತಿಗಾಗಿಯೇ ಕೊಡಗಿನ ಈಗಿನ ಮುಖ್ಯ ವೆಟರ್‌ನರಿ ಆಫೀಸರ್ರಾಗಿರುವ ಶ್ರೀ. ಸಿ ಕೆ. ಕಾಳಪ್ಪನವರನ್ನು ಇತ್ತೀಚೆಗೆ ಬೆಂಗಳೂರಿಗೆ ಕಳುಹಿಸಿದ್ದು ಎಂದು ಕೇಳಿದ್ದೇನೆ. ಇದು ನಿಜವಾದರೆ ಅದರ ಪೂರ್ಣ ಮಾಹಿತಿಯು ಅವರಿಗಿರುವದರಿಂದ ಅದರ ಉಪಯೋಗವು ಇಲ್ಲಿ ಯೋಗ್ಯವಾಗಿ ಆಗುವದರಲ್ಲಿ ಸಂಶಯವಿಲ್ಲ. ಕೊಡಗಿನ ಹತ್ತಿರದಲ್ಲೇ ಅಂದರೆ ಬೆಂಗಳೂರಿನಲ್ಲಿ ಇದು ತಯಾರಾಗುವದರಿಂದ ಬೇಗ ನಮಗೆ ದೊರೆತು ತನ್ನ ಶಕ್ತಿಯನ್ನು ಕಳಕೊಳ್ಳದೆ ಪರಿಣಾಮಕಾರಿಯಾಗುವದು.

ಕೊಡಗಿನಲ್ಲಿ ಈಗ ನಡೆಸುತ್ತಿರುವ ಟಿಶ್ಯೂವೇಕ್ಸಿನ್ ಇಂಜೆಕ್ಷನ್ ಮಾಡಿಯೂ ಜಾನುವಾರುಗಳು ಸತ್ತಿವೆಯೆಂದೂ ಆದ್ದರಿಂದ ಜನರಲ್ಲಿ ಈ ಔಷಧಿಯ ಮೇಲೆ ಸಾಕಷ್ಟು ನಂಬಿಕೆಯಿಲ್ಲವೆಂದೂ, ಕೆಲವರು ಸ್ವತಂತ್ರವಾಗಿ ಬ್ಲಡ್‌ವಿರಸನ್ನು ತರಿಸಿ ತಮ್ಮ ದನಗಳಿಗೆ ಅವುಗಳ ಇಂಜೆಕ್ಷನ್ ಕೊಡಗಾದರೆ ಸರಕಾರದ ಯೋಜನೆಯು ಜಯಪ್ರದವಾಗಲಾರದಷ್ಟೆ. ಯಾವ ಯೋಜನೆಯಾದರೂ ಯಶಸ್ವಿಯಾಗಬೇಕಾದರೆ ಅದು ಜನತೆಯ ವಿಶ್ವಾಸವನ್ನು ಹೊಂದಿಕೊಂಡಿದೆ. ಆದ್ದರಿಂದ ಸರಕಾರದವರು ಈ ನಂಬಿಕೆಯನ್ನು ಗಳಿಸಿಕೊಳ್ಳಲು ಪ್ರಯತ್ನಿಸಬೇಕು.

ಟಿಶ್ಯೂ ವೇಕ್ಸಿನನ್ನು ತಂದ ಹಾಗೆ ಉಪಯೋಗಿಸಲು ಸಾಧ್ಯವಿಲ್ಲ. ಅದನ್ನು ಉಪಯೋಗಿಸಬೇಕಾದರೆ ಕೆಲವುಮೂರ್ವಾಡುಗಳನ್ನು ಮಾಡಬೇಕು. ಇದಕ್ಕೆ ತಕ್ಕ ನಿಪುಣರು ಬೇಕಲ್ಲದೆ ಯೋಗ್ಯ ಸಲಕರಣೆಗಳೂ ಬೇಕು. ಈ ಕೆಲಸವನ್ನು ಕೊಡಗಿನಲ್ಲಿ ವೆಟರಿನರಿ ಕಂಪೌಂಡರುಗಳೂ ಮಾಡುತ್ತಿರುವರೆಂದೂ, ಅವರೇ ಜಾನುವಾರುಗಳಿಗೆ ಇಂಜೆಕ್ಷನ್ನೂ ಮಾಡುತ್ತಿರುವರೆಂದು ತಿಳಿದು ಬಂದಿದೆ. ಇದು ಸಹಜವಾದರೆ ಸರಕಾರದ ಈ ಉದ್ಯಮದಲ್ಲಿ ಸಾರ್ವಜನಿಕರ ನಂಬಿಕೆ ಗಳಿಸುವ ರೀತಿ ಇದಲ್ಲ.

ಇನ್ನೊಂದು ವಿಚಾರವೆಂದರೆ ಜನರಿಂದ ಫೀಜು ವಸೂಲು ಮಾಡುವದು. ಖಡ್ಡಾಯವಾಗಿ ಮಾಡುವ ಯಾವ ಕಾರ್ಯಕ್ಕೂ ಫೀಜು ಹಾಕುವದು ಸಾಧ್ಯವಿಲ್ಲ. ಕೊಡಗು ಸರಕಾರವು ಈ ಫೀಜು ಹಾಕಿರುವದು ಯೋಗ್ಯವಲ್ಲ. ಇದನ್ನು ವಜ ಮಾಡುವದು ಅಗತ್ಯ.

ಸಂಕ್ಷಿಪ್ತವಾಗಿ ಹೇಳಬೇಕಾದರೆ ಸರಕಾರವು ಈಗ ಉಪಯೋಗಿಸುತ್ತಿರುವ ಟಿಶ್ಯೂ ವೇಕ್ಸಿನನ್ನು ಮನ್ನ ಮಾಡಿ ಬ್ಲಡ್ ವಿರಸನ್ನು ಜಾರಿಯಲ್ಲಿ ತರಬೇಕು. ಈಗ ಹಾಕಿರುವ ಒಂದಾಣೆ ಕರವನ್ನು ತೆಗೆದು ಹಾಕಬೇಕು. ಡಾಕ್ಟರುಗಳಿಂದಲೇ ಜನರಿಗೆ ತೊಂದರೆಯಾಗದ ರೀತಿ ಇಂಜೆಕ್ಷನ್ ಮಾಡುವ ಏರ್ಪಾಡು ಮಾಡಬೇಕು. ಇದಕ್ಕೆ ಇಲಾಖೆಯವರೂ, ಮೇಲಾಗಿ ಸರಕಾರದವರೂ ಪೂರ್ಣ ನಿಗವಿಡಬೇಕು. ಇದು ಮಹತ್ವದ ಪ್ರಶ್ನೆ. ನಾಡಿನ ಏಳಿಗೆಯು, ಸರಕಾರದ ಪ್ರಗತಿಯು, ಜನಾಂಗದ ಪುರೋಭಿವೃದ್ಧಿಯು ಸಂಯೋಜಿಸಿದೆ.

1944ರಲ್ಲಿ ಸಿಲೋನಿನಲ್ಲಿ ಈ ರೋಗವನ್ನು ಯಾವ ರೀತಿ ತಡೆಗಟ್ಟಿದ್ದು ಎಂಬ ಒಂದು ನಿದರ್ಶನವನ್ನು ಕೊಡಬಹುದು. 'ಮೊಡ್ಡ ರೋಗವು ಪ್ರಾರಂಭವಾದ ಗ್ರಾಮಗಳ ಎಲ್ಲಾ ಜಾನುವಾರುಗಳನ್ನೆ ಸುತ್ತುಗಟ್ಟಿ ಎಲ್ಲವಕ್ಕೂ ಮೂರು ದಿನಗಳಿಗೊಮ್ಮೆಯಂತೆ ಮೂರು ಮೂರು ಬಾರಿ ಇಂಜೆಕ್ಷನ್ ಕೊಡಲಾಯಿತು. ನಂತರ ಅವುಗಳನ್ನು ಬಿಡಲಾಯಿತು. ಇದರ ಫಲಿತಾಂಶವು ಜಯಪ್ರದವಾಗಿ ಪುನಹ ಅಲ್ಲಿ ಈ ರೋಗವು ತಲೆದೋರಲಿಲ್ಲ. ಈ ಮೊದರಿಯನ್ನು ಅನುಸರಿಸಿ ಜಾನುವಾರುಗಳ ಈ ದೊಡ್ಡ ರೋಗವನ್ನು ನಿವಾರಿಸುವದು ಸಾಧ್ಯ' ಎಂಬುವುದಾಗಿ ಸಿಲೋನಿನ ಡಾ. ಅಮರಸಿಂಗರವರು ಬರೆದಿದ್ದಾರೆ. ಈ ರೀತಿಯ ಒಂದು ಪರಿಣಾಮಕಾರಕವಾದ ಕಾರ್ಯವನ್ನು ಕೈಕೊಂಡು ಕೊಡಗಿನ ರೈತರ ದುರ್ದೆಶೆಗೆ ಮುಖ್ಯ ಕಾರಣವಾದ ಈ ರೋಗವನ್ನು ನಿವಾರಿಸಬೇಕಾದದು ಕರ್ತವ್ಯ.

ಕೊಡಗು

ತಾ. ೨೬-೧-೧೯೪೫ನೇ ಶುಕ್ರವಾರ

"ಜನವರಿ ೨೬"

ಕಳೆದ ಹದಿನೈದು ವರ್ಷಗಳಿಂದ ಜನವರಿ ತಾರೀಕು 26 ನ್ನು ಸ್ವಾತಂತ್ರ್ಯ ದಿನವೆಂದು ಹಿಂದೂ ಜನತೆಯು ಆಚರಿಸುತ್ತಾ ಬಂದಿದೆ. ಈ ದಿನಾಚರಣೆಯ ಬಗ್ಗೆ ಎಷ್ಟೇ ಆತಂಕ, ಅಡ್ಡಿಗಳು ಬಂದರೂ ಚ್ಯುತಿಯಿಲ್ಲದೆ ಈ ವರೆಗೆ ನಡೆದಿದೆ. ಕಾಂಗ್ರೆಸನ್ನು ನಿಯಮಬಾಹಿರ ಸಂಸ್ಥೆಯೆಂದು ಸಾರಿದ ಮೇಲೂ ಈ ಆಚರಣೆಗೆ ಇನ್ನಷ್ಟು ಮಹತ್ವಬಂದಿದೆ. ಹಿಂದಿನ ರೀತಿಯಂತೆ ಬಹಿರಂಗವಾಗಿ ಧ್ವಜವಂದನೆ, ಮೆರವಣಿಗೆ, ಏಟಿಂಗು ನಡೆಸುವದು ಕೂಡದೆಂಬ ಆಜ್ಞೆ ಬಂದಂದಿನಿಂದ ಈ ಆಚರಣೆಯು ಪ್ರತಿಯೊಬ್ಬ ಕಾಂಗ್ರೆಸ್ ಭಕ್ತನ ಅಗ್ನಿಪರೀಕ್ಷೆಯ ವಸ್ತುವಾಗಿದೆ. ಪ್ರತಿಯೊಬ್ಬನೂ ತನ್ನ ಆಂತರಂಗ ಸಾಕ್ಷಿಯಾಗಿ ಈ ಪ್ರತಿಜ್ಞೆಯನ್ನು ತೆಗೆದುಕೊಂಡು ತನ್ನ ಮನಸ್ಸಿಗೆ ಒಪ್ಪುವಂತೆ ಹಿಂದೂ ಸ್ವಾತಂತ್ರ್ಯದ ಬಗ್ಗೆ ಶ್ರಮಿಸುವ ಅನುವ್ಹಾಗಿದೆ. ಗಾಂಧೀಜಿಯವರು ತಮ್ಮ ಸಂದೇಶದಲ್ಲಿ ಹೀಗೆ ನುಡಿದಿದ್ದಾರೆ. 'ಮೆರವಣಿಗೆ, ಸಭೆಗಳನ್ನು ನಡೆಸುವ ಅವಶ್ಯಕತೆಯಿಲ್ಲ. ತಮ್ಮ ಆತ್ಮಸಾಕ್ಷಿಗನುಸಾರವಾಗಿ ಧ್ವಜವಂದನೆ ಮತ್ತು ಪ್ರತಿಜ್ಞಾಸ್ವೀಕಾರ ಮಾಡಬೇಕು. ಅಧಿಕಾರಿಗಳೊಡನೆ ಘರ್ಷಣೆಬರದಂತೆ ವರ್ತಿಸುವದು.' ಈ ಮಾತುಗಳ ಅರ್ಥವು ಸ್ಪಷ್ಟವಾಗಿದೆ. ಬಾಹ್ಯಾಡಂಬರ ಇಂದು ಬೇಕಿಲ್ಲ. ರಸ್ತೆ ರಸ್ತೆಗಳಲ್ಲಿ ಜಯಘೋಷಮೊಳಗುವದೂ ಅವಶ್ಯವಿಲ್ಲ. ಈ ರೀತಿಯ ಕಾರ್ಯಕ್ರಮಗಳನ್ನು ಈ ವರೆಗೆ ಕಾಂಗ್ರೆಸು ಅನುಸರಿಸಿದೆ. ಅದು ಹೆಚ್ಚಿನ ಫಲಕಾರಿಯಲ್ಲವೆಂಬುದೂ ವ್ಯಕ್ತವಾಗಿದೆ. ಆದ್ದರಿಂದಲೇ ಮಹಾತ್ಮಾಜಿಯವರು ಇಂದು ರಚನಾತ್ಮಕ ಕಾರ್ಯಕ್ರಮವನ್ನೇ ತನ್ನ ಸರ್ವಸ್ವವಾಗಿಟ್ಟುಕೊಂಡಿರುವದಾಗಿದೆ. ಆದೇ ಸ್ವರಾಜ್ಯಗೋಪುರಕ್ಕೆ ಹೆಬ್ಬಾಗಿಲು. ವಿಧಾಯಕ ಕಾರ್ಯಕ್ರಮವೇ ಇಂದು ಸರ್ವರ ಮುಂದಿರುವ ಅನುಕರಣೀಯ ವಸ್ತು. ಜನವರಿ 26 ರ ಈ ಪವಿತ್ರ ದಿನದಲ್ಲಿ ನಾವು ಪುನಹ ಪ್ರತಿಜ್ಞೆಮಾಡಿದ್ದೇವೆ. ನಾಡಿನ ಅಭಿವೃದ್ಧಿಗೆ ಸಹಾಯಕವಾದ ಈ ಕಾರ್ಯಕ್ರಮಗಳನ್ನು ಕೈಕೊಂಡು ದ್ವಿಗುಣಿತ ಉತ್ಸಾಹದಿಂದ ಕಾರ್ಯಮಾಡುವ ಪಣತೊಡಬೇಕು. ಈ ಪಾವನ ದಿನದಿಂದ ನಮ್ಮಲ್ಲಿ ಈ ವರೆಗಿದ್ದ ಅನಾಸಕ್ತಿಯು ಮಾಯವಾಗಿ ನವಚೇತನವು ಸ್ಪುರಿಸಲಿ. ನಾಡಿನ ಏಳಿಗೆಗಾಗಿ, ನೂಲುವದು, ನೇಯುವದು, ಹರಿಜನೋದ್ಧಾರ, ಪಾನನಿರೋಧ, ಖಾದಿ ಪ್ರಚಾರ ಮೊದಲಾದ ಕಾರ್ಯಕ್ರಮಗಳಲ್ಲಿ ನಮ್ಮ ಮನಸ್ಸು ನಡಲಿ.

1930ನೇ ಜನವರಿ 26ರಲ್ಲಿ ಹಿಂದೂ ದೇಶದ ಪ್ರತಿಜ್ಞೆಯನ್ನು ಕಾಂಗ್ರೆಸು ರೂಪಿಸಿ ಅಂಗೀಕರಿಸಿದಾಗ ಪ್ರಧಾನ ಪಾತ್ರಧಾರಿಗಳಾಗಿದ್ದ, ಈ ಠರಾವಿನ ಸೂತ್ರಚಾಲಕರಾಗಿದ್ದ, ಮಹಾ ವ್ಯಕ್ತಿ ಇಂದು ಜೈಲಿನಲ್ಲಿದ್ದಾರೆ. ಅವರೇ ಅಲ್ಲ; ಅಮೂಲ್ಯರತ್ನ ಪ್ರಾಯರಾದ ಕಾಂಗ್ರೆಸಿನ ಅನೇಕ ಮುಂದಾಳುಗಳು ಜೈಲಿನಲ್ಲಿದ್ದಾರೆ. ಭಾರತದ ಸ್ವಾತಂತ್ರ್ಯಕ್ಕಾಗಿ ಅಸಮಾನ ತ್ಯಾಗ ಮಾಡಿದ, ಪಡಬಾರದ ಕಷ್ಟವನ್ನು ಸಹಿಸಲಾರದ ಅಪಮಾನವನ್ನು ಸಹಿಸಿದ, ಜೀವನವನ್ನು ತೃಣವಾಗಿ ಕಂಡು ಸ್ವತಂತ್ರ ವೇದಿಕೆಯಲ್ಲಿ ಬಲಿದಾನ ಮಾಡಿದ ಸಾವಿರಾರು ವೀರರ ಸ್ಮರಣೆಯು ನಮ್ಮ ಮನಸಿನಲ್ಲಿದೆ. ಇದೇ ಆಲ್ಲ; ಜಗತ್ತಿನ ರಾಷ್ಟ್ರಗಳಂತೆಯೇ ತನಗೂ ಸ್ವಾತಂತ್ರ್ಯ ಬೇಕೆಂದು ಕೇಳುವ ತಪ್ಪಿಗಾಗಿ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸು ಪರಿ ಪರಿಯ ಕಷ್ಟಕ್ಕೊಳಗಾಗಿದೆ; ಶಾಸನವಿರುದ್ಧ ಸಂಸ್ಥೆಯೆಂದು ಸಾರಲ್ಪಟ್ಟಿದೆಯೆಂಬುದೂ ನಮ್ಮ ಮನೋಭಿತ್ತಿಯಲ್ಲಿದೆ. ನಾಡಿನ ಏಳಿಗಾಗಿ ದುಡಿದು ತ್ಯಾಗ ಮಾಡಿದ ಮಹಾಮಹಿಮರನ್ನು, ಆದರ್ಶ ವ್ಯಕ್ತಿಗಳನ್ನು ನೆನೆದು ನಾವು ಕಾರ್ಯ ಪ್ರವರ್ತರಾಗಬೇಕು. ನಮ್ಮೆಲ್ಲರ ಹಿತಕ್ಕಾಗಿ, ನಾಡಿನ ಬಂಧವಿಮೋಚನೆಗಾಗಿ ಸೆರೆಮನೆಯಲ್ಲಿ ಪಡಬಾರದ ಕಷ್ಟಗಳನ್ನು ಪಡುತ್ತಿರುವ ನಮ್ಮ ಮನೋದೇವತೆಗಳನ್ನು ನೆನೆದು ಕಾರ್ಯ ಕೈಗೊಳ್ಳಬೇಕು. ನಾಡಿನ ಏಳಿಗೆ, ಮೂಡುವ ಕಾರ್ಯದಲ್ಲಲ್ಲದೆ ಆಡುವ ಮಾತಿನಲ್ಲಿಲ್ಲವೆಂದು ಮನಗಂಡು, ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಜಗತ್ತಿನ ರಾಷ್ಟ್ರಗಳ ಕೂಟದಲ್ಲಿ ಭಾರತವೂ ತೆಗೆ ದೊರೆಯಬೇಕಾದ ಸ್ಥಳವನ್ನು ಗಳಿಸಿ, ಜಗತ್ತಿನ ಉದ್ಧಾರಕ್ಕೂ, ಮಾನವ ಕೋಟಿಯ ಮುನ್ನಡೆಗೂ ಸಹಾಯಕರಾಗುವಾ.

ಗಾಡಿ ಬಾಡಿಗೆ.

ಗಾಡಿ ಬಾಡಿಗೆಯನ್ನು ಐದು ಮೈಲುಗಳ ದೂರದಲ್ಲಿ ಗಾಡಿಗೆ ಮೈಲು ಒಂದಕ್ಕೆ ಹತ್ತಾಣೆ, ಅದರ ಮೇಲಿನ ದೂರಕ್ಕೆ 8 ಆಣೆಯೆಂದು ಮೊದಲು ಪ್ರಕಟಿಸಲಾಗಿತ್ತು. ಹಾಗೆ ಮಾಡಿದರೆ ಗ್ರಾಮಾಂತರ ರಸ್ತೆಗಳಲ್ಲಿ ಗಾಡಿಗಳು ಹೋಗದೆ ಕೇವಲ ಉತ್ತಮ ರಸ್ತೆಗಳಲ್ಲಿ ಮಾತ್ರ ಗಾಡಿಗಳು ತಿರುಗುವಂತಾಗಿ ರೈತನಿಗೆ ನಷ್ಟವಾಗುವದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಅದಕ್ಕೆ ಆಸ್ಪದವಿಲ್ಲ. ಯಾಕೆಂದರೆಗಾಡಿಗಳ ಕೆಲಸ ಇಂದು ಹಳ್ಳಿ ರಸ್ತೆಗಳಲ್ಲಲ್ಲದೆ ಟೌನುಗಳಲ್ಲಿಲ್ಲ. ಯಾಕೆಂದರೆ ಟೌನುಗಳ ಬತ್ತ ಸಾಗಿಸಲು ಲಾರಿಗಳು ತುಂಬಾ ಇವೆ. ಲಾರಿಗಳು ಹೋಗದ ಕಡೆ ಮಾತ್ರ ಗಾಡಿಗಳ ಅವಶ್ಯಕತೆ ಬೀಳುವದಾಗಿದೆ. ಆದ್ದರಿಂದ ಗಾಡಿಗಳೆಲ್ಲವೂ ಸಾಧಾರಣವಾಗಿ ಬತ್ತ ಮೂರಾಟಕ್ಕೆ ನಿಯಮಿಸಲ್ಪಟ್ಟ ಕೇಂದ್ರಗಳಿಗೆ ಬತ್ತ ಸಾಗಿಸುವ ಕೆಲಸ ಮಾಡುವವಲ್ಲದೆ ಬೇರಿಲ್ಲ. ಆದ್ದರಿಂದ ಮೇಲಿನ ದರದಲ್ಲಿ ವ್ಯತ್ಯಾಸ ಮಾಡುವ ಅವಶ್ಯಕತೆ ಇಲ್ಲ. ಅಲ್ಲದೆ ಹೀಗೆ ವ್ಯತ್ಯಾಸ ಮಾಡುವದರಿಂದ ಕೆಲವೊಂದು ಗಾಡಿ ಮಾಲೀಕರಿಗೆ ಲಾಭವಾಗಬಹುದಾದರೂ ಬಹುಮತ ರೈತರಿಗೆ ತೊಂದರೆಯಾಗುವುದರಲ್ಲಿ ಸಂಶಯವಿಲ್ಲ. ಯಾವಾಗಲೂ ಬಹುಮತದ ಹಿತವನ್ನೆ ಬಯ್ಸಬೇಕಲ್ಲದೆ ಕೆಲವೊಬ್ಬರ ಏಳ್ಗೆಗಾಗಿ ಬಹುಮತವನ್ನು ಕಷ್ಟಕ್ಕೀಡು ಮಾಡುವದು ಯೋಗ್ಯವಲ್ಲ. ಈಗ ನಿಶ್ಚಯಿಸಲ್ಪಡಬೇಕೆನ್ನುವ ಧಾರಣೆಯಾದರೂ ಗಾಡಿ ಮಾಲೀಕರಿಗೆ ಲಾಭದಾಯಕವಾಗದಿದ್ದರೂ, ಹೊಟ್ಟಿಗೆ ಕಾಲು ಕೊಡುವದಿಲ್ಲ. ಆದ್ದರಿಂದ ಐದು ಮೈಲುಗಳ ಒಳಗೆ ಮೈಲಿಗೆ ಭರ್ತಿ ಗಾಡಿಗೆ (120 ಪರೆ) ಹತ್ತಾಣೆಯೆಂದೂ ಆದರ ಮೇಲ್ಪಟ್ಟು ಗಾಡಿಗೆ ಎಂಟಾಣೆಯೆಂದೂ ನಿಶ್ಚಯಿಸಬೇಕಾದ್ದು ಅತೀ ಅವಶ್ಯವಾಗಿದೆ.

ವರ್ತಮಾನ.

ತಾರೀಕು 4-2-45 ರಲ್ಲಿ ಕೊಡಗು ಕರ್ನಾಟಕ ಸಂಘದವರು ಕನ್ನಡ ಹಬ್ಬವನ್ನು ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ಆಚರಿಸುವರು. ಈ ಸಂದರ್ಭದಲ್ಲಿ ಅದೇ ತಾರೀಕು ಬೆಳಿಗ್ಗೆ 10 ಗಂಟೆಗೆ ಹೈಸ್ಕೂಲ್ ವಿದ್ಯಾರ್ಥಿಗಳ ಚರ್ಚಾಸ್ಪರ್ಧೆಯು ನಡೆಯುವದು. ಸಾಯಂಕಾಲ 6 ಗಂಟೆಗೆ ಸಂಗೀತ ಮತ್ತು ಭಾಷಣಗಳು ನಡೆಯುವವು. ಎಲ್ಲರಿಗೂ ಆಮ್ಹಾನವಿದೆಯೂ ಕಾರ್ಯದರ್ಶಿಯವರು ತಿಳಿಸಿರುವರು.

ಕಳೆದ ನವಂಬರ್ ತಿಂಗಳಲ್ಲಿ ನಡೆದ ಹಿಂದೀಪರೀಕ್ಷೆಗಳಲ್ಲಿ ಶ್ರೀಗಳಾದ ಎಂ. ಪಿ. ನಂಜಮ್ಮ, ಬಿ. ಡಿ. ಪಾರ್ವತಿ, ಜಿ. ಸೀತಾಲಕ್ಷ್ಮಿ ಮತ್ತು ಕೆ. ಎಸ್. ಬಸಪ್ಪನವರುಗಳು ಪ್ರಾಥಮಿಕ ಪರೀಕ್ಷೆಯಲ್ಲೂ, ಶ್ರೀ. ಬಿ. ಡಿ. ಗಣಪತಿಯವರು (ಪ್ರಥಮ ಶ್ರೇಣಿ) ಮಧ್ಯಮಿಕ ಪರೀಕ್ಷೆಯಲ್ಲೂ ಶ್ರೀಮತಿ ಎಂ. ಎಸ್. ರಾಧಾಭಾಯಿಯವರು (ಪ್ರಥಮಶ್ರೇಣಿ) ರಾಷ್ಟ್ರಭಾಷಾ ಪರೀಕ್ಷೆಯಲ್ಲೂ ಪಾಸಾಗಿರುವರು.

ವೀರಾಜಪೇಟೆಯ ಹಿಂದೀ ಮಂಡಳಿಯ ಆಶ್ರಯದಲ್ಲಿ ಪರೀಕ್ಷೆಗೆ ಕುಳಿತವರಲ್ಲಿ ಶ್ರೀಗಳಾದ ಎಂ. ಎಂ. ಪೊನ್ನಮ್ಮ, ಮಿಸೆಸ್ ಎಸ್. ಶಾಮಣ್ಣ, ಎಂ. ಜಿ. ಪೊನ್ನಪ್ಪ, ಬಿ. ಪಿ. ಗಣಪತಿ ಇವರುಗಳ ಪ್ರಾಥಮಿಕದಲ್ಲೂ ಶ್ರೀ. ಎಂ. ಬಿ. ಮುತ್ತಣ್ಣನವರು ಮಧ್ಯಮಿಕದಲ್ಲೂ ಪಾಸಾಗಿರುವರು.

ಮಡಿಕೇರಿ ವೇದಾಂತ ಸಂಘದ ವಾರ್ಷಿಕ ಸಭೆಯು ತಾ. 28-1-45 ರಲ್ಲಿ ಬೆಳಿಗ್ಗೆ 10-30 ಗಂಟೆಗೆ ಸಂಘದ ಮಂದಿರದಲ್ಲಿ ಜರಗುವದು. ಎಲ್ಲ ಮೆಂಬರುಗಳೂ ಹಾಜರಾಗಬೇಕಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.

ತಾ. 20-1-45 ರಲ್ಲಿ ಪೊಡಿಕೇರಿ ಓಂಕಾರೇಶ್ವರ ಸೇವಾಸ್ಥಾನ ಹಾಲ್‌ನಲ್ಲಿ ಕೊಡವ ಸಂಘದ ವಿಶೇಷ ಮಹಾಸಭೆಯು ಶ್ರೀ. ಕೇತೆಯಂಡ ಕಾಳಪ್ಪನವರ ಅಧ್ಯಕ್ಷತೆಯಲ್ಲಿ-ಸಮಾಜದ ಹಬ್ಬ, ಉತ್ಸವಗಳಲ್ಲಿ ಮಾದಕ ಪದಾರ್ಥಗಳನ್ನು ಮುಂದೆ ಸೇರಿಸಬೇಕೋ ಯಾ ಈಗಿನಂತೆ ಸೇರಿಸದೆ ನಡೆಸಬೇಕೋ-ಎಂಬ ವಿಚಾರ ಚರ್ಚೆ ನಡೆದು ದೊಡ್ಡ ಬಹುಮತದಿಂದ ಮದ್ಯಪಾನ ಸೇರಿಸಕೂಡದೆಂದು ತೀರ್ಮಾನವಾಯಿತು.

ಬಹಿರಂಗವಾಗಿ ಕಾಂಗ್ರೆಸ್ ಧ್ವಜ ಹಾರಿಸಿ, ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವದಕ್ಕಾಗಿ ಮಡಿಕೇರಿಯ ಕಾಂಗ್ರೆಸಿಗರು ತಾ. 26-1-45ರಲ್ಲಿ ಜಮಾನ್ದಾರರ ಸಂಘದ ಕಟ್ಟಡದ ಎದುರು ಸೇರಿದಾಗ ಪೊಲೀಸರು ಆತಂಕಪಡಿಸಲು, ಅಧಿಕಾರಿಗಳೊಡನೆ ಘರ್ಷಣೆತರುವ ಪ್ರಸಂಗಕ್ಕೆ ಎಡೆಕೊಡಬಾರದೆಂಬ-ಗಾಂಧೀಜಿಯವರ ಸಲಹೆಯಂತೆ ಪೊಲೀಸರ ಆತಂಕವನ್ನು ಮನ್ನಿಸಿಯೆ ಖಾಸಗಿಯಾಗಿ ಧ್ವಜವಂದನೆ ಮತ್ತು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಮಾಡಿದರಾಗಿ ವಾರ್ತೆ.

ಶ್ರೀ. ಗುಡ್ಡಂಡ ಕಾರ್ಯಪ್ಪನವರನ್ನು ದಕ್ಷಿಣ ಕೊಡಗಿಗೂ, ಶ್ರೀ. ಎಂ. ಶ್ರೀನಿವಾಸರವರನ್ನು ಉತ್ತರ ಕೊಡಗಿಗೂ ಬತ್ತನಿಯಂತ್ರಣ ಚೀಫ್ ಇನ್ಸ್‌ಪೆಕ್ಟರುಗಳಾಗಿ ನೇಮಿಸಲಾಗಿದೆ. ಇವರ ಬದಲು ಶ್ರೀ. ಕಾಳಮಾಡ ಚಿಟ್ಟಿಯಪ್ಪನವರನ್ನು ವೀರಾಜಪೇಟೆನಾಡಿಗೂ, ಶ್ರೀ. ಕೆ. ಎಂ. ನಂಜುಂಡರವರನ್ನು ಮಡಿಕ್ಕೇರಿನಾಡಿಗೂ ಪಾರುಪತ್ತೆಗಾರರಾಗಿ ನೇಮಿಸಲ್ಪಟ್ಟಿದೆ.

ಲಕ್ಕುಂದ ಗ್ರಾಮದ ಶ್ರೀ. ಕೊಡಂದೆರ ಕಾರ್ಯಪ್ಪನವರು ಕೊಡವ ವಿದ್ಯಾಭಿವೃದ್ಧಿ ಫಂಡಿಗೆ ರೂ. 500 ಕೊಟ್ಟು ಆಜೀವ ಸದಸ್ಯರಾಗಿರುವರು.

ತಾ. 20-1-45 ರಲ್ಲಿ ನಡೆದ ಸಹಕಾರ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಶ್ರೀ. ಕಂಜಿತಂಡ ಕುಶಾಲಪ್ಪನವರನ್ನು ಬ್ಯಾಂಕಿನ ಪ್ರೆಸಿಡೆಂಟರಾಗಿಯೂ, ಶ್ರೀ. ಕೊಂಗೆಟ್ಟಿರ ಅಪ್ಪಯ್ಯನವರನ್ನು ಗೌ. ಕಾರ್ಯದರ್ಶಿ ಮತ್ತು ಖಜಾನ್ಜಿಯರಾಗಿ ಆರಿಸಲಾಗಿದೆ.

ಡೆಲ್ಲಿಯಲ್ಲಿ ತಾ. 29-1-45 ರಲ್ಲಿ ನಡೆಯುವ ಆಹಾರ ನಿಯಂತ್ರಣ ಸಮ್ಮೇಳನಕ್ಕೆ ಚೀಫ್ ಕಮಿಷನರು ತಾರೀಕು 23-1-45 ರಲ್ಲಿ ಹೋಗಿರುವರು.

ರಣಭೇರಿ.

ಜರ್ಮನರ ಅತ್ಯುಷ್ಣ ಧಾಳಿ.

ರಷ್ಯನರ ಮುನ್ನಡೆ.

— ಲೇ:—'ಗುಪ್ತ' —

ಲೂಝುನ್ ದ್ವೀಪದ ಮೇಲೆ ಜನರಲ್ ಮೆಕಾರ್ಥರರವರು ಕೈಕೊಂಡ ಧಾಳಿಯು ಪ್ರಾಮುಖ್ಯವಾದುದಿದೆ. ಅಮೇರಿಕನರು ಲೆಟಿದ್ವೀಪದಲ್ಲಿ ಬಂದಿಳಿದಾಗ ಅವರನ್ನು ಮುಂದೆ ಹೆಜ್ಜೆ ಇಡಲು ಬಿಡೆನೆಂದು ಜಪಾನರು ಪ್ರಚಾರಮಾಡಿದರು. ಆದರೆ ಅಮೇರಿಕನರು ಕ್ರಮವಾಗಿ ಲೆಟಿದ್ವೀಪದಿಂದ ಮುಂದೆ ಸಾಗಿ ಫಿಲಿಪೈನಿನ ಮುಖ್ಯ ದ್ವೀಪ ಒಂದಾದ ಲೂಝುನ್‌ನಲ್ಲಿಳಿದದ್ದು ಮಹತ್ವದ ವಿಚಾರವು. ಮಿತ್ರರು ಈ ಧಾಳಿಗೆ 800 ಹಡಗಗಳನ್ನೂ 2500 ಸಣ್ಣ ನಾಕೆಗಳನ್ನೂ ಉಪಯೋಗಿಸಿದ್ದರು. ಅಮೇರಿಕನರು ಈ ದ್ವೀಪದಲ್ಲಿ 30 ಗ್ರಾಮ, ಪಟ್ಟಣಗಳನ್ನು ಹಿಡಿದು 20 ಹೈಲುಗಳ ವರೆಗೆ ಮುಂದರಿದಿರುವರು. ಈ ವರೆಗೆ ಹೆಚ್ಚಿನ ಪ್ರತಿಭಟನೆಯನ್ನು ಜಪಾನರು ಮಾಡದಿದ್ದರೂ ಈಗೀಗ ಸ್ವಲ್ಪ ಕೈ ಕೈ ಕೊಡುತ್ತಿದ್ದಾರೆ. ಲೂಝುನ್ ಕಾಳಗವು ಇನ್ನೂ ಬಲವಾಗಿ ರೂಪುಗೊಳ್ಳಲಿದೆ. ಈ ದ್ವೀಪದಲ್ಲಿ ಜಪಾನರ 250,0,00 ರಿಂದ ಹಿಡಿದು 500,000 ದ ವರೆಗೆ ಸೇನೆ ಇರುವದಾಗಿ ತಿಳಿದುಬಂದಿದೆ. ಇಷ್ಟು ಜಪಾನ್ ಯೋಧ್ದರಿದ್ದು ದ್ವೀಪವನ್ನು ಸುಲಭದಲ್ಲಿ ಬಿಟ್ಟುಕೊಡಲಿಕ್ಕಿಲ್ಲ. ಜಪಾನರು ಅಮೇರಿಕನರ ದಾಳಿಯನ್ನು ನಿರೀಕ್ಷಿಸಿರಲಿಲ್ಲವೆಂದು ಕಂಡುಬರುತ್ತದೆ. ಆದ್ದರಿಂದಲೇ ಅವರು ಪ್ರತಿಭಟಿಸದೆ ಈಗ ತಕ್ಕ ಏರ್ಪಾಡು ಮಾಡುತ್ತಿರಬಹುದು. ಪೂರ್ವಭಾಗದ ಉದಯಭಾನುವೆಂದುಕೊಳ್ಳುವ ಜಪಾನು ಉಮಿಗ ಅಂತರಾಷ್ಟ್ರೀಯ ಆಕಾಶದಲ್ಲಿ ಬೆಳಗುವದೋ ಯಾ ನಾಶವಾಗುವದೋ ಮುಂದೆ ನೋಡಬೇಕು. ಚೀನಾದಲ್ಲಿಯೂ ಜಪಾನರ ಕೈ ಕಳೆದ ಕೆಲವು ದಿನಗಳಂತೆ ಸಾಗುತ್ತಿಲ್ಲ. ಬರ್ಮಾದಲ್ಲಿಳಿದ ಮಿತ್ರಸೇನೆಗಳು ಮಂಡಲೆಯ ಕಡೆ ಸಾಗುತ್ತಿವೆ. ಇಲ್ಲಿಯೂ ಜಪಾನರ ಕೈ ಬಿಗಿಯೂಗಿಲ್ಲ. ಇದೇನು? ಜಪಾನರು ಈ ರೀತಿ ತಟಸ್ಥರಾಗಿರುವರು? ಇದರ ಗುಟ್ಟೇನೆಂದು ಹಲವರು ಪ್ರಶ್ನೆ ಹಾಕುತ್ತಿದ್ದಾರೆ. ಇದಕ್ಕೆ ಸಮರ್ಪಕವಾದ ಉತ್ತರ ಕೊಡುವದು ಸಾಧ್ಯವಿಲ್ಲ. ರಷ್ಯಾ ಜಪಾನುಗಳ ಒಪ್ಪಂದವಾಗುವದೇ ಎಂದೂ ಕೇಳುವನರಿದ್ದಾರೆ. ಜಪಾನರು ಯಾವ ರೀತಿಯ ಯುದ್ಧ ಮಾಡದೆ ಇರುವದು ಅವರ ಶಕ್ತಿಯು ಹ್ರಾಸವಾದ ಕಾರಣದಿಂದ ಎಂಬ ಮಾತನ್ನು ಸ್ವೀಕರಿಸಲು ಸಾಧ್ಯವಿಲ್ಲ. ದಿನೇದಿನೇ ಮಿತ್ರರು ಜಪಾನಿನ ಹತ್ತಿರ ಹತ್ತಿರ ಬರುತ್ತಿರುವದರಿಂದ ತಮ್ಮ ಅಂತರಿಕ ರಕ್ಷಣೆಯಲ್ಲಿ ಅವರು ಮಗ್ನವಾಗಿರಲೂ ಸಾಕು. ಆದರೆ ಈ ಸ್ಥಿತಿ ಬಹು ದಿನಗಳ ವರೆಗೆ ಇರಲು ಸಾಧ್ಯವಿಲ್ಲ. ಜಪಾನರು ತಮ್ಮ ಪೂರ್ಣ ಶಕ್ತಿಯನ್ನು ಉಪಯೋಗಿಸಿ ಮಿತ್ರರನ್ನು ಪ್ರತಿಭಟಿಸದಿರರು. ಶಾಂತಸಾಗರದಲ್ಲಿ ಮಿತ್ರರು ಈ ರೀತಿಯ ಒಂದು ಧಾಳಿ ಪ್ರಾರಂಭಿಸಿದುದರಿಂದ ಯೂವ ಯುದ್ಧವು ಮುಂದೆ ಹುಗಿಯುವದು. ಜಪಾನು ಪೊದಲು ನಿರ್ನಾಮವಾಗುವದೋ ಯಾ ಜರ್ಮನಿಯೋ ಎಂದು ಪ್ರಶ್ನೆ ಕೇಳುವವರಿದ್ದಾರೆ. ಜಪಾನ್, ಜರ್ಮನಿಗಳ ನಿರ್ನಾಹುದ ವಿಚಾರ ಇನ್ನೂ ಬಂದಿಲ್ಲ. ಯುದ್ಧದಲ್ಲಿ ಜಯಯೂರಿಗೆ ದೊರೆಯುವದೆಂಬುದನ್ನೇ ಖಚಿತವಾಗಿ ಹೇಳಲು ಅಸಾಧ್ಯವಾಗಿರುವಾಗ ಯೂವ ದೇಶ ಮೊದಲು ನಾಶವಾಗುವದೆಂದು ಹೇಳುವದು ಹೇಗೆ? ಜಪಾನರ ಶಕ್ತಿ ಕ್ಷೀಣಿಸಿಲ್ಲ; ಆದು ಬಲಯುತವಾಗಿಯೇ ಇದೆಯೆಂದು ಮಿತ್ರರೂ ಸಹ ಹೇಳುತ್ತಾರೆ. ಆತ್ತ ಜರ್ಮನರ ಶಕ್ತಿಯನ್ನು ಪ್ರತ್ಯಕ್ಷ ರಣರಂಗದಲ್ಲೇ ನೋಡಬಹುದು. ಕಳೆದ ವಾರದ ವರದಿ ಬರೆಯುವಾಗ ರಂಡಸ್ಟಟನ ದಾಳಿಗೆ ಮಿತ್ರರು ತಡೆಹಾಕಿದ್ದಾರೆಂದು ಬರೆದಿದ್ದೆನು. ಆದರೆ ರಂಡಸ್ಟಟನು ಆ ತಡೆಯಿಂದಲೇ ಧೃತಿಗೆಡುವವನಲ್ಲನೆಂಬುದು ಈಗ ಬಂದಿರುವ ವಾರ್ತೆಯಿಂದ ತಿಳಿಯಬರುತ್ತದೆ. ಜಪಾನ್ ಸೇನೆಗಳು ಮೇಜಿನೋ ಕೋಟೆಯನ್ನು ತ್ಯಂಡರಿಸಿ ಅಮೇರಿಕದ ಎಳನೇ ದಳವನ್ನು 25 ಸೈಲುಗಳ ವರೆಗೆ ಹಿಮ್ಮೆಟ್ಟಿಸಿ ಹೆಗ್ಗೆ ಮೊದಲಾದ ಹಲವು ಪಟ್ಟಣಗಳನ್ನು ವಶಪಡಿಸಿಕೊಂಡಿದ್ದಾರೆ. ಮಿತ್ರರ ಏಳನೆ ದಳವು ಹಿಮ್ಮೆಟ್ಟುತ್ತಿದೆ. ಆದಕ್ಕೆ ಹೆಚ್ಚೆ ಊರಲು ಸ್ಥಳಕೊಡದೆ ಜರ್ಮನ್ ಸೇನೆಗಳು ಹಿಂಬಾಲಿಸುತ್ತಿವೆ. ವಿವಿಧ ಕ್ಷೇತ್ರಗಳಲ್ಲಿ ಕರ್ಕಶಕದನಗಳಾಗುತ್ತಿವೆ. ಕೆಲವು ಬಾಗದಲ್ಲಿ ಜರ್ಮನರು ಹಿಂತೆಗೆದಿದ್ದರೂ ಇನ್ನು ಕೆಲವದರಲ್ಲಿ ಮಿತ್ರರು ಹಿಂದಕ್ಕೆ ಬಂದಿದ್ದಾರೆ. ರಣಕ್ಷೇತ್ರವನ್ನು ಪರಿಶೀಲಿಸಿದರೆ ಜರ್ಮನರು ಇನ್ನೂ ಶಕ್ತರಿದ್ದಾರೆ ಎಂಬುದು ತಿಳಿಯುವದು.

ಇದೇ ಅಲ್ಲ; ಜರ್ಮನರ ಇತರ ಸಿದ್ಧತೆಗಳೂ ಸಹ ಇದನ್ನೆ ಸಮರ್ಥಿಸುತ್ತವೆ. ಯುದ್ಧ ಪ್ರಾರಂಭವಾದ ಕೆಲವು ದಿನಗಳಲ್ಲಿ ಜರ್ಮನ್ ಯು ಬೋಟುಗಳು ಮಿತ್ರರ ಹಡಗುಗಳನ್ನು ಸಾಲುಸಾಲಾಗಿ ಸಮುದ್ರದಲ್ಲಿ ಮುಳುಗಿಸಿ ಇಡೀ ಮಿತ್ರ ಶಿಬಿರದಲ್ಲಿ ಕಳವಳವನ್ನುಂಟುಮಾಡಿದವು. ಮಿತ್ರರ ಹಡಗಗಳೆಲ್ಲವೂ ಜಲಸಮಾಧಿ ಹೊಂದುವವೋ ಎಂಬ ಭೀತಿ ಆಗ ಹಲವರಿಗೆ ಇತ್ತು. ಆದರೆ ಮಿತ್ರರು ಈ ಯು ಬೋಟುಗಳನ್ನು ನಾಶಪಡಿಸತೊಡಗಿ ಸುಮಾರು 300 ಯು ಬೋಟುಗಳನ್ನು ನಾಶಪಡಿಸಿದರು. ಆಗ ಜರ್ಮನರ ಹತ್ತಿರ ಸುಮಾರು 400 ಯು ಬೋಟುಗಳಿರಬಹುದೆಂದು ಅಂದಾಜುಮಾಡಲಾಗಿತ್ತು. ಅವುಗಳಲ್ಲಿ 300 ಬೋಟುಗಳ ನಾಶದ ನಂತರ ಯು ಬೋಟುಗಳ ಹಾವಳಿಯೂ ಕಡಿಮೆಯಾಗತೊಡಗಿತು. ಆದರೆ ಕಳೆದ ನವಂಬರ್ ತಿಂಗಳಿಂದ ಪುನಹ ಯು ಬೋಟುಗಳ ಹಾವಳಿಯು ಅಟ್ಲಾಂಟಿಕ್ ಸಮುದ್ರದಲ್ಲಿ ವಿಪರೀತವಾಗಿದೆ. ಜರ್ಮನರ 400 ಯು ಬೋಟುಗಳು ಈ ಸಮುದ್ರದಲ್ಲಿ ಸುತ್ತುತಿವೆಯೆಂದು ತಿಳಿದುಬಂದಿದೆ. ಹಾಗಾದರೆ ಮಿತ್ರರು ಜರ್ಮನಿಯ ಯು ಬೋಟುಗಳ ಶಕ್ತಿಯನ್ನು ಗಣಿಸಿದ್ದು ತಪ್ಪೆಂದಾಯಿತು. ಒಂದು ನೇಳೆ ಆದು ನಿಜವಿದ್ದರೆ ಜರ್ಮನರು ಸಾಕಷ್ಟು ಬೋಟುಗಳನ್ನು ತಯಾರಿಸಿಕೊಂಡು ಸಶಕ್ತರಾದರೆಂದು ಹೇಳಬಹುದು. ಹೀಗೆ ಒಂದಲ್ಲ ಹಲವು ರೀತಿಯಿಂದ ಜರ್ಮನರು ಸುಧಾರಿಸಿರುವದು ಕಂಡುಬರುತ್ತದೆ. ಅವರ ಟ್ಯಾಂಕುಗಳ ನವೀನ ಮಾದರಿ, ಗುಸ್ತಾಪ್ಸಗಳ ಪರಂಪರೆ, ಈಗ ನಡೆಯುತ್ತಿರುವ ಹೊಸ ಧಾಳಿ ಇವು ಜರ್ಮನಿಯ ಸಜ್ಜೇತನಾವಸ್ಥೆಯನ್ನು ಸೂಚಿಸುವನೇ ವಿನಹ ಅಶಕ್ತ ಸ್ಥಿತಿಯನ್ನಲ್ಲ.

ಆದರೆ ಇತ್ತ ಪೂರ್ವ ಭಾಗದಲ್ಲಿ ರಷ್ಯನರು ಕಳೆದ ವಾರದಿಂದ ಬಹು ರಭಸದಿಂದ ಮುಂದೆ ನುಗ್ಗುತ್ತಿದ್ದಾರೆ. ಸ್ಟಾಲಿನನು ವೀರಾವೇಶದಿಂದ, ಅರಿಭಯಂಕರನಾಗಿ ಪರಿಣಮಿಸಿದ್ದಾನೆ. ಜರ್ಮನ್ ಸೇನೆಗಳು ಅತ್ಯುಗ್ರಪ್ರತಿಭಟನೆ ಮಾಡುತ್ತಿದ್ದರೂ ರಷ್ಯಾದ ಏರಾಟವನ್ನು ಹದಗೆಡಿಸಲು ಶಕ್ತವಾಗಿಲ್ಲ. ರಷ್ಯನರು ಬರ್ಲಿನ್ ನಗರದಿಂದ ಈಗ ಮುನ್ನೂರು ಮೈಲುಗಳ ದೂರದಲ್ಲಿದ್ದಾರೆ. ರಷ್ಯನರ ಈ ಧಾಳಿಯು ಜರ್ಮನರಿಗೆ ತಲೆನೋವು ಹಿಡಿಸಿರಬೇಕು. ಮುಂದೆ ನೋಡುವ, ವಿನಾಗುವದೆಂದು.

ಬೇಕಾಗಿದೆ.

ಹತ್ತು ಹುಡುಗರಿಗೆ ಮರ ಮತ್ತು ಕಬ್ಬಿಣ ಕೆಲಸಗಳ ತರಬೇತು ಕೊಡಲು ಒಬ್ಬ ಮಧ್ಯವಯಸ್ಕನ ಪ್ರವೀಣನನ್ನು ಬೇಕಾಗಿದೆ. ಮಾಸಿಕ ವೇತನ ರೂ. 45/- ಮತ್ತು ಪ್ರಾವಿಡೆಂಟ್ ಫಂಡು. ಉಮೇದುವಾರರು ತಮ್ಮ ಅರ್ಜಿಗಳನ್ನು ಯೋಗ್ಯತಾ ಪತ್ರಗಳೊಂದಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು. ಏರಿ ಮತದವರಿಗೆ ಪ್ರಾಮುಖ್ಯತೆ ಕೊಡಲಾಗುತ್ತೆ.

ಕನ್ಸಾಲಿಡೇಟೆಡ್ ಕಾಫಿ ಎಸ್ಟೇಟ್ಸ್,
(1943) ಲಿಮಿಟೆಡ್.
ಪೊಳ್ಳಿಬೆಟ್ಟ.

ಮೂರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆಯಲ್ಲಿರುವ ಸಮೀರಿನ ಅನುಕೂಲತೆ, ಎಲೆಕ್ಟ್ರಿಕ್ ದೀಪವಿರುವ, ನೆಲಕ್ಕೆ ಹಂಚು ಹಾಕಿದ ಉತ್ತಮ ಆವರಣದಲ್ಲಿರುವ ಮಹಡಿ ಮನೆಯು ಹೊರಮನೆ ಸಮೇತ ಮೂರಾಟಕ್ಕಿದೆ. ದನಕರುಗಳನ್ನು ಸಾಕಲಿಕ್ಕೂ, ಇನ್ನಿತರ ಯಾವುದೇ ಸೌಕರ್ಯಕ್ಕೂ ಅನುಕೂಲವಿದೆ. ಕಾನ್ವೆಂಟ್ ಯಾ ಹೈಸ್ಕೂಲು ಶಾಲೆಗಳಿಗೆ ಹೋಗುವ ಮಕ್ಕಳಿಗೂ, ಮಾರ್ಕೆಟಿಗೂ, ಗಾಳಿ ವಿಹಾರಕ್ಕೂ ಅತ್ಯುತ್ತಮವಾದ ಸ್ಥಳವಾಗಿದೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ಅಡ್ರೆಸಿಗೆ ಬರೆಯಿರಿ.

'X'
C/o. 'ಕೊಡಗು',
2–2. ಮಡಿಕೇರಿ.

—೦೦—

ಮೂರಾಟಕ್ಕಿದೆ.

ಮಡಿಕೇರಿ–ಸಿದ್ದಾಪುರ ರಸ್ತೆಯ ಬಾಜೆನಲ್ಲು ಅಭ್ಯತ್‌ಮಂಗಲ ಗ್ರಾಮಕ್ಕೆ ಸೇರಿದ 60 ಏಕ್ರೆ ಒಳ್ಳೇ ಸ್ಥಿತಿಯಲ್ಲಿರುವ ಕಾಫಿ ತೋಟ, ಸುಮಾರು 450 ಬಟ್ಟ ನೀರಾವರಿ ಭೂಮಿ, ಆಳುಗಳಿಗೆ ಹಂಚು ಹಾಕಿದ ಲೈನ್ ಮತ್ತು ಸ್ಟೋರು, ಕಿತ್ತಳೆ, ಯಾಲಕ್ಕಿ, ಬಾಳೆ, ಒಳ್ಳೆಮೆಣಸು ವಗೈರೆಯಿಂದ ಕೂಡಿದ ಒಟ್ಟು 78 ಖುಷ್ಕೆ ತೋಟ ಮೂರಾಟಕ್ಕಿದೆ. ಖಾಯಿಸ್‌ದಾರರು ಖುದು ಅಜಮಾಯಿಸಿಯೂಗಲೀ ಯೂ ಈ ಕೆಳಗಿನ ಪತ್ತೆಗೆ ಬರೆದುಕೊಂಡಾಗಲೀ ಹೆಚ್ಚಿನ ವಿವರ ತಿಳಿದುಕೊಳ್ಳಬಹುದು.

ಡಿ. ವೆಂಕಟರಾವ್,
ಅತ್ತಿಮಂಗಲ ತೋಟ,
4-4 ಸಿದ್ದಾಪುರ.

—೦0೦—

ಶ್ರೀ ಶಾರದಾ ಕಾಫಿಪುಡಿ

ಯಾವುದೊಂದು ಮಿಶ್ರಣ ವಿಲ್ಲದೆ ಪ್ರತಿ ದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.

ಶ್ರೀ ಶಾರದಾ ಕಾಫಿ ವರ್ಕ್ಸ್
ನಾಪೋಕ್ಲು ವಯಾ ಭಾಗಮಂಡಲ
ನಾಪೋಕ್ಲು ಪೋಸ್ಟ್

14)

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

10) ಕೊಡಗಿನ ಪ್ರವರ್ತಕರು:—

ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಮುದ್ದಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್ಸ್.

ಮೋಹನ್ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಟೋ—ಫಾಸ್‌ಫೋ—ನೂಲ್ಫ್"
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ನೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನನಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳವೆ.

ಇದರಲ್ಲಿ ಇಲೆಕ್ಟ್ರಿಕ್ ಸಾನ್‌ಫೋನೂಲ್ಫ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಸೆಪ್ಸಿನ್, ಸಾಲ್, ನೂಲ್ಫ್ ಎಕ್ಸ್‌ಟ್ರಾಕ್ಟ್ ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿದೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
17) ಗೋಖಲೆ ರೋಡ್, ಬೋಂಬೆ.

TO GREET YOU.

For the past
REMEMBRANCE

For the present
KIND THOUGHTS

For the future
GOOD WISHES

The Canara Banking CorporatiOn Limited.

(Incorporated in British India Liablity of Members is Limited)
12) ETD—1906.
Head Office: U D I P.I, South Kanara.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತ್ತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
16) ಪಿ. ಬಿ. ನಂ. 337, ಮದ್ರಾಸು.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

53) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಿದೆ
	ಚಾಲ್ತಿಯಿರುವ ವಿಮೆ	೧೬,೪೪,೭೮,೦೦೦ ,,
	ಆಸ್ತಿ	೬,೩೦,೪೬,೦೦೦ ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

"ಟ್ರಾಪಿಕಲ್"

(ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವನಸಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ ಟ್ರಾಪಿಕಲಿನಲ್ಲಿ ವಿಮೆ ಮಾಡಿರಿ.

ಮುಖ್ಯ ಏಜೆಂಟರು: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:
ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,
50) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಸೊಬಲಗು ರೂ. 95,000, ಜಮಾ ಬಂದ ಠೇವಣಾತಿ 2,24,750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara. for 'Kodagu' Ltd.

'ಪಾಕಿಸ್ತಾನವಿಲ್ಲದೆ ಸ್ವರಾಜ್ಯ ದೊರೆಯದು'

— ಮಡಿಕೇರಿಯಲ್ಲಿ ನವಾಬ್‌ರ್ಝೂಫರ ಭಾಷಣ —

ತಾ. 20-1-45ರಲ್ಲಿ ಅಖಿಲ ಭಾರತ ಮುಸ್ಲಿಂಲೀಗಿನ ಕ್ರಿಯಾತ್ಮಕ ಸಮಿತಿಯವರು ಮಂಗಳೂರಿನ ಮೂರ್ಗವಾಗಿ ಮಡಿಕೇರಿಗೆ ಬಂದಿದ್ದರು. ಅಖಿಲ ಭಾರತ ಮುಸ್ಲಿಂಲೀಗಿನ ಕಾರ್ಯದರ್ಶಿಗಳಾದ ನವಾಬ್‌ರ್ಝೂದಾ ಲಿಯಾಖತ್ ಅಲಿಖಾನರೂ, ಅಖಿಲ ಭಾರತ ಲೀಗ್ ಸ್ವಯಂಸೇವಕ ದಳದ ಸೇನಾನಿ ನವಾಬ್ ಸಿದ್ದೀಕ್ ಅಲಿಯವರೂ ಬಂದಿದ್ದರು. ಮಧ್ಯಾಹ್ನ 2 ಗಂಟೆಗೆ ಕೋಹಿನೂರ್ ಟಾಕೀಸಿನ ಟೆಂಟಿನಲ್ಲಿ ಇವರ ಭಾಷಣ ನಡೆಯಿತು. ಸ್ವಾಗತ ಪುಷ್ಪವರ್ಷಾರ್ಪಣವಾದ ಮೇಲೆ ನವಾಬ್‌ರ್ಝೂದ ಲಿಯಾಖತರು ಇಂಗ್ಲಿಷಿನಲ್ಲಿ ಈ ರೀತಿ ಭಾಷಣ ಮಾಡಿದರು.

'ನಿಮ್ಮ ಆದರ ಪೂರ್ವಕವಾದ ಸ್ವಾಗತಕ್ಕಾಗಿ ನಾವಿಷ್ಟೇಸೆ ಮುಸ್ಲಿಂಲೀಗು ಕಳೆದ ಏಳು ವರ್ಷಗಳಿಂದ ಬೆಳೆಯುತ್ತಾ ಬಂದಿದೆ. ಹಿಂದೂದೇಶದ ಮೇಲೆ ಇನ್ನೊಬ್ಬರಿಗಿರುವಷ್ಟೇ ಹಕ್ಕು ಪ್ರತಿಯೊಬ್ಬನಿಗೂ ಇದೆ. ಹಿಂದೂದೇಶದ ಸ್ವಾತಂತ್ರ್ಯವನ್ನು ಎಲ್ಲರಂತೆ ನಾವೂ ಆಶಿಸುತ್ತೇವೆ. ಭಾರತದ ಇತರ ಕೋಮುಗಳಿಗಿಂಥಾ ಮುಸ್ಲಿಮರು ಬ್ರಿಟಿಷರ ಆಡಳಿತದಲ್ಲಿ ಕಷ್ಟಕ್ಕೊಳಗಾಗಿರುವದಾಗಿದೆ. ಆದ್ದರಿಂದ ಭಾರತ ಸ್ವಾತಂತ್ರ್ಯದ ವಿಚಾರದಲ್ಲಿ ಮುಸ್ಲಿಂಮರು ಎಂದೂ ಹಿಂದೆ ನಿಲ್ಲುವವರಲ್ಲ. ಆದರೆ ಭಾವಿಭರತಖಂಡದಲ್ಲಿ ನೂರು ಮಿಲಿಯ ಸಂಖ್ಯೆಯಲ್ಲಿರುವ ಮುಸ್ಲಿಮರ ಸ್ಥಾನವೇನೆಂಬುದನ್ನು ನಿಶ್ಚಯಿಸಿಕೊಳ್ಳದೆ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸುವದು ಸಾಧ್ಯವಿಲ್ಲ. ಹಿಂದೂದೇಶದಲ್ಲಿ ಇಂದು ಮೂರು ಸಮಸ್ಯೆಗಳು ಒಂದನೊಂದು ಹೊಂದಿಕೊಂಡಿವೆ. ಭಾರತ ಸ್ವಾತಂತ್ರ್ಯ, ಹಿಂದೂ ಮುಸ್ಲಿಂ ಐಕ್ಯ, ಮತ್ತು ಪಾಕಿಸ್ತಾನ. ಪಾಕಿಸ್ತಾನವಿಲ್ಲದೆ ಹಿಂದೂ ಮುಸ್ಲಿಂ ಐಕ್ಯವಾಗದು. ಹಿಂದೂ ಮುಸ್ಲಿಂ ಐಕ್ಯತೆಯಿಲ್ಲದೆ ಭಾರತವು ಸ್ವತಂತ್ರವಾಗದು. ಮತ್ತೊಬ್ಬರಿಗೆ ನ್ಯಾಯವಾದ ಹಕ್ಕನ್ನು ಕಿತ್ತುಕೊಳ್ಳುವದು ಪಾಕಿಸ್ತಾನದ ಉದ್ದೇಶವಲ್ಲ. ಹಿಂದೂಗಳಿಗೂ ಮುಸ್ಲಿಮರಿಗೂ ಎಲ್ಲರಿಗೂ ಸ್ವಾತಂತ್ರ್ಯ ಬೇಕೆಂದೇ ಪಾಕಿಸ್ತಾನ ನುಡಿಯುತ್ತದೆ.'

ಇವರ ಭಾಷಣವನ್ನು ಉರ್ದುವಿನಲ್ಲಿ ನವಾಬ್ ಸಿದ್ದೀಕ್ ಅಲಿಯವರು ಹೇಳಿದರು. ನಂತರ ತಲಚೇರಿಯ ಶ್ರೀ ಅಬ್ದುಲ್ ಸೇಠರು ಇದನ್ನು ಮಲಯಾಳದಲ್ಲಿ ಹೇಳಿ ಮುಸ್ಲಿಂ ಲೀಗಿಗೆ ಸರ್ವರೂ ಸದಸ್ಯರಾಗಿ ಸೇರಬೇಕು, ಬೆಂಬಲಕೊಡಬೇಕೆಂದು ಆಪೀಲು ಮಾಡಿದರು. ನಂತರ ಶ್ರೀ. ಮಹಮ್ಮದ್‌ಖಾನರು ವಂದನೆಯರ್ಪಿಸಿದ ನಂತರ 'ಮುಸ್ಲಿಂ ಲೀಗ್ ಝಿಂದಾಬಾದ್' ಮೊದಲಾದ ಘೋಷಣೆಯಿಂದ ಸಭೆಯು ಮುಕ್ತಾಯವಾಯಿತು.

ನಂತರ ಇವರು ವೀರಾಜಪೇಟೆಗೆ ಬಂದರು. ಇಲ್ಲಿಯ ಮುಸ್ಲಿಮ್ಮರು ಇವರಿಗೆ ಅಭೂತಪೂರ್ವ ಸ್ವಾಗತವಿತ್ತರು. ಮೇಲೆ ಹೇಳಿದ ಧಾಟಿಯಲ್ಲಿಯೇ ನವಾಬ್‌ರ್ಝೂದರು ಉರ್ದುವಿನಲ್ಲಿ ಭಾಷಣ ಮಾಡಿದರು.

ಕೇಂದ್ರದಲ್ಲಿ ಸಮ್ಮಿಶ್ರ ಸರಕಾರ.

ಭುಲಾಬಾಯಿಯವರ ಪ್ರಯತ್ನಕ್ಕೆ ಜಯ?

ಹಿಂದೂದೇಶದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ನ್ಯಾಯಶಾಸನ ಸಭೆಯಲ್ಲಿಯ ಕಾಂಗ್ರೆಸ್ ಪಕ್ಷದ ಮುಂದಾಳಾದ ಶ್ರೀ ಭುಲಬಾಯಿ ದೇಸಾಯಿಯವರು ಪ್ರಯತ್ನಿಸುತ್ತಿರುವರು. ಇವರು ಮುಸ್ಲಿಂಲೀಗಿನ ಕಾರ್ಯದರ್ಶಿಗಳಾದ ನವಾಬ್‌ರ್ಝೂದಾ ಲಿಯಾಖತ್ ಅಲಿಖಾನರನ್ನು ಕಂಡು ಮಾತಾಡಿ ಕೇಂದ್ರದಲ್ಲಿ ಸರ್ವಪಕ್ಷೀಯ ಸರಕಾರವನ್ನು ಸ್ಥಾಪಿಸುವ ವಿಚಾರದಲ್ಲಿ ಒಮ್ಮತಕ್ಕೆ ಬ್ಬಂದಿರುವರು. ಪುನಹ ದೇಸಾಯಿಯವರು ವೈಸರಾಯರನ್ನು ಕಾಣಲಿರುವರು ಎಂಬ ವಿಚಾರಗಳನ್ನು ವಾಚಕರು ಈ ಮೊದಲೇ ಓದಿರಬಹುದು. ಇದೀಗ ದೇಸಾಯಿಯವರು ವೈಸರಾಯರ ಭೇಟಿ ತೆಗೆದುಕೊಂಡಿರುವರು. ವೈಸರಾಯರು ದೇಸಾಯಿಯವರು ಸೂಚಿಸಿದ ಸೂಚನೆಗಳನ್ನು ಒಪ್ಪಿಕೊಂಡಿರುವದಿಂದೂ ಶೀಘ್ರದಲ್ಲಿಯೇ ಕೇಂದ್ರ ಸರಕಾರವು ಸರ್ವಪಕ್ಷಗಳ ಮುಖಂಡರಿಂದ ರೂಪಿಸಲ್ಪಡುವದೆಂದೂ ವಾರ್ತೆಗಳಿವೆ. ಈಗ ಬಂದಿರುವ ವಾರ್ತೆಗಳಂತೆ ಮುಸ್ಲಿಂಲೀಗ್ ಮತ್ತು ಕಾಂಗ್ರೆಸಿನೊಳಗಿನ ಒಪ್ಪಂದದ ಶರತ್ತುಗಳು ಈ ರೀತಿಯಿವೆಯೆಂದು ಸ್ಥೂಲವಾಗಿ ಹೇಳಬಹುದಾಗಿದೆ.

ಪಾಕಿಸ್ತಾನದ ಬಗ್ಗೆ ಎರಡು ಪಕ್ಷಗಳೂ ತಮ್ಮ ಮೇಲೆ ಯಾವದೇ ಬಾಧ್ಯಂಧನ ಹಾಕಿಕೊಳ್ಳಲಾರವು. ಇದನ್ನು ಇನ್ನೂ ದೊಡ್ಡ ಘಟನಾತ್ಮಕ ನಿರ್ಣಯಕ್ಕೆ ಬಿಡುವದು.

ಇದನ್ನು ಕಾರ್ಯರೂಪಕ್ಕೆ ತರಲು ಸದ್ಯದ ಘಟನೆಯಲ್ಲಿ ಬದಲಾವಣೆಮಾಡುವ ಅಗತ್ಯವಿಲ್ಲ.

ಕೇಂದ್ರ ಕಾರ್ಯಕಾರಿ ಮಂಡಲದಲ್ಲಿ ಕಾಂಗ್ರೆಸಿಗೂ ಮುಸ್ಲಿಂಲೀಗಿಗೂ ಸಮಾನವಾದ ಸ್ಥಾನಿನಿಧ್ಯವಿರುವದಲ್ಲದೆ ಅದರ ಮೇಲೆ ನೂರಕ್ಕೆ ಇಪ್ಪತ್ತೈದು ಇತರ ಪಕ್ಷಗಳ ಪ್ರತಿನಿಧಿಗಳಿರಬೇಕು.

ಹೀಗೂ ಈ ರೀತಿ ಒಪ್ಪಂದವಾಗಿ ಸರಕಾರವೂ ಅದನ್ನು ಒಪ್ಪುವ ಚಿಹ್ನೆ ಕಂಡುಬರುತ್ತಿರುವದು ಶುಭವಾರ್ತೆಯೆನ್ನಬಹುದು. ಮುಂದೆ ಘಟಿಸುವ ವಿಚಾರಗಳನ್ನು ನೀರೀಕ್ಷಿಸುತ್ತಿರುವಾ.